ಶೀಘ್ರವಾಗಿ ಇತ್ಯರ್ಥಪಡಿಸಲಾಗುತ್ತಿದೆ. ಆದುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ ಎಂದು ಹೇಳಲಾಗುವುದಿಲ್ಲ. ಆದಾಗ್ಯೂ ಶಿಕ್ಷಕರ ನೇಮಕಾತಿಯನ್ನು ಅನುಮೋದಿಸುವ ಅಧಿಕಾರವನ್ನು ವಿಕೇಂದ್ರೀಕರಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

(4) **ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿಮಾಡುವುದು**

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು): ಮಾನ್ಯ ಅಧ್ಯಕ್ಷರೇ, ಈಗ ಶಿಕ್ಷಕರ ಹುದ್ದೆಗೆ 18934 ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಅರ್ಜಿಗಳನ್ನು ಕರೆದಿದ್ದು, ಈ ಅರ್ಜಿಗಳನ್ನು ಯಾವ ಆಧಾರದ ಮೇಲೆ ಆಯ್ಕೆ ಮಾಡುತ್ತಿರುವುದು ಮತ್ತು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ತರಬೇತಿ ಪಡೆದ ನಿರುದ್ಯೋಗಿ ಶಿಕ್ಷಕರ ಸಂಘದವರು ವಿಧಾನ ಸೌಧದ ಮುಂದೆ ಧರಣಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಇದರ ಬಗ್ಗೆ ಸರ್ಕಾರ ಹೇಳಿಕೆ ಕೊಡಬೇಕಾಗಿ ಕೋರುತ್ತೇನೆ.

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಒಟ್ಟು 18934 ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿರುತ್ತದೆ. ಈ ರೀತಿಯ ನೇಮಕಾತಿಯನ್ನು ಅಭ್ಯರ್ಥಿಗಳ ಅರ್ಹತೆಯ ಆಧಾರದ ಮೇಲೆ ನೇಮಕ ಮಾಡಲಾಗುತ್ತದೆ. ಒಟ್ಟು ಹುದ್ದೆಗಳಲ್ಲಿನ ಶೇಕಡ 50 ರಷ್ಟು ಹುದ್ದೆಗಳನ್ನು ಮಹಿಳೆಯರಿಗಾಗಿ ಮೀಸಲಿಡಲಾಗಿದೆ. ಅಲ್ಲದೆ, ಈ ನೇಮಕಾತಿಯಲ್ಲಿ 50,000 ಜನಸಂಖ್ಯೆಗೆ ಕಡಿಮೆ ಇರುವ ಪ್ರದೇಶದಲ್ಲಿ ಎಸ್.ಎಸ್.ಎಲ್.ಸಿ.ಯನ್ನು ವ್ಯಾಸಂಗ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಶೇಕಡ 5ರಷ್ಟು ಕೃಪಾಂಕವನ್ನು ಅವರು ಪಡೆಯುವ ಸರಾಸರಿ ಶೇಕಡ ಅಂಕಕ್ಕೆ ಸೇರಿಸಲಾಗುವುದು. ಹಾಗೂ ಜಿಲ್ಲಾ ಪರಿಷತ್ ಮತಿಯಿಂದ ನೇಮಕಗೊಂಡು ಹಾಲಿ ಕೆಲಸ ನಿರ್ವಹಿಸುತ್ತಿರುವ ಗೌರವಧನ ಶಿಕ್ಷಕರುಗಳಿಗೆ ಅವರುಗಳು ಸಲ್ಲಿಸಿರುವ ಪ್ರತಿ ವರ್ಷದ ಸೇವೆಗೆ ಶೇಕಡ 2 ರಷ್ಟು ಕೃಪಾಂಕವನ್ನು ಅವರುಗಳು ಪಡೆದ ಸರಾಸರಿ ಶೇಕಡ ಅಂಕಕ್ಕೆ ಸೇರಿಸಿ ಆಯ್ಕೆ ಮಾಡಲಾಗುವುದು. ಇಂತಹ ಅಭ್ಯರ್ಥಿಗಳಿಗೆ ವಯೋಮಿತಿಯ ನಿರ್ಬಂಧವಿರುವುದಿಲ್ಲ.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ತರಬೇತಿ ಪಡೆದ ನಿರುದ್ಯೋಗಿ ಶಿಕ್ಷಕರ ಸಂಘದವರು ವಿಧಾನ ಸೌಧದ ಮುಂದೆ ಧರಣಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಈ ಬಗ್ಗೆ ಸದರಿ ಸಂಘದವರು ಸರ್ಕಾರಕ್ಕೆ ಯಾವುದೇ ಸೂಚನೆಯನ್ನು : ಮನವಿಯನ್ನು ಸಲ್ಲಿಸಿರುವುದಿಲ್ಲ.

ಚುನಾವಣಾ ಪ್ರಸ್ತಾವಗಳು

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು): (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ,

ಅ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 265(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ ಹನ್ನೆರಡು ಜನ ಸದಸ್ಯರನ್ನು ಚುನಾಯಿಸಬೇಕು.

ಆ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 268(1)ನೇ ನಿಯಮದ ಅನುಸಾರವಾಗಿ ಈ ಸಭೆ ಅಂದಾಜುಗಳ ಸಮಿತಿಗೆ ಹದಿನೈದು ಜನ ಸದಸ್ಯರನ್ನು ಚುನಾಯಿಸಬೇಕು.

ಇ) ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮಗಳ 271(1)ನೇ ನಿಯಮದ ಅನುಸಾರವಾಗಿ ಈ ಸಭೆ ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ಒಂಭತ್ತು ಜನ ಸದಸ್ಯರನ್ನು ಚುನಾಯಿಸಬೇಕು.